<u>ದಿನಾಂಕ **03.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲು ಃ ಪ್ರತಿವಾದಿ ಪರ ವಕೀಲರಿಂದ</u>

ಈ ದಾವೆಯನ್ನು ಜಮೀನಿನ ಪಾಲಿಗೋಸ್ಕರ ಸಲ್ಲಿಸಿರುತ್ತಾರೆ. ನನ್ನ ಮಗಳು 1 ನೇ ಪ್ರತಿವಾದಿಯೊಂದಿಗೆ 25 ವರ್ಷಗಳ ಹಿಂದೆ ಮದುವೆ ಆಗಿರುತ್ತಾರೆ. ನನ್ನಮಗಳಿಗೆ 2 ಜನ ಮಕ್ಕಳಿರುತ್ತಾರೆ. 2ನೇ ವಾದಿಗೆ ಆರೋಪಿ ವರ್ಷ, 3 ನೇ ವಾದಿಗೆ 20 ವರ್ಷವಾಗಿರುತ್ತದೆ. ನನ್ನ ಮಗಳಿಗೆ 40 ವರ್ಷ ವಯಸ್ಸಾಗಿರುತ್ತದೆ. ನನ್ನ ಮಗಳು ದಾವೆ ಸಲ್ಲಿಸುವಾಗ ಅವರ ಮತ್ತು ಅವರ ಮಕ್ಕಳ ವಯಸ್ಸನ್ನು ಸುಳ್ಳಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗಳು ಮತ್ತು ಮಧುಸೂಧನ್ ನಡುವೆ ಇದೇ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನ ಆದೇಶ ಆಗಿರುತ್ತದೆ ಎಂದರೆ ಸರಿ. ನನ್ನ ಮಗಳು ಕೆ.ಕಾಳೇನಹಳ್ಳಿ ಗ್ರಾಮದಲ್ಲಿ ಅಂಗನವಾಡಿ ಕಾರ್ಯಕರ್ತೆ ಆಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಈಗ ಬಿಟ್ಟಿರುತ್ತಾರೆ. ನನ್ನ ಮಗಳು ಮತ್ತು 1ನೇ ಪ್ರತಿವಾದಿ ಈ ದಾವೆ ಸಲ್ಲಿಸುವ ಮೊದಲೇ ವಿಭಾಗ ಪತ್ರವನ್ನು ಮಾಡಿಕೊಂಡು ಆಸ್ತಿಗಳನ್ನು ಹಂಚಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವ ಆಸ್ತಿಗಳು 4-5 ಕಡೆ ಇರುತ್ತವೆ. ಒಟ್ಟು ಕುಟುಂಬದ ಆಸ್ತಿಗಳಲ್ಲಿ 1ನೇ ಪ್ರತಿವಾದಿಗೆ ಯಾವ ಆಸ್ತಿಯು ಬಂದಿರುತ್ತದೆ ಎಂದು ಗೊತ್ತಿಲ್ಲ. ಕುಟುಂಬದ ಆಸ್ತಿಗಳನ್ನಲ್ಲದೇ ಇರುವ ಬೇರೆ ಕುಟುಂಬದ ಆಸ್ತಿಗಳನ್ನು ಸಹ ಸೇರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮಗಳು 1ನೇ ಪ್ರತಿವಾದಿಯನ್ನು ಮದುವೆ ಆದ ನಂತರ ಅನ್ಯ ಕೋಮಿನ ಹುಡುಗನೊಂದಿಗೆ ಸೇರಿಕೊಂಡು ಮನೆ ಬಿಟ್ಟು ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ವಿಚಾರದ ಬಗ್ಗೆ ದಿನ ಪತ್ರಿಕೆಯಲ್ಲೂ ಸಹ ಪ್ರಕಟ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅದು ಅಲ್ಲದೆ ನನ್ನ ಮಗಳಿಗೆ ಇತರ ವ್ಯಕ್ತಿಗಳ ಜೊತೆ ಸಂಪರ್ಕ ಇರುವ ಬಗ್ಗೆ ಛಾಯಚಿತ್ರಗಳನ್ನು ಹಾಜರು ಪಡಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರು ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.